ಶ್ರೀ ಹೆಚ್.ಸಿ. ಬಾಲಕೃಷ್ಣ: ಅಧ್ಯಕ್ಷರೆ, ನೀವೇ ಕೇಳದಿದ್ದರೆ ಇನ್ನು ಯಾರು ಕೇಳಬೇಕು. ನೀವು ಶಾಸಕರ ಸಹಾಯಕ್ಕೆ ಬರದಿದ್ದರೆ ಹೇಗೆ.

ಅಧ್ಯಕ್ಷರು: ಇದು ಗಮನ ಸೆಳೆಯುವ ಸೂಚನೆ.

ಶ್ರೀ ಎಂ. ಕೃಷ್ಣಾರೆಡ್ಡಿ: ಹಣಕಾಸಿನ ಕೊರತೆ ಇಲ್ಲವೆಂದು ಏಕೆ ಹೇಳಬೇಕಾಗಿತ್ತು. ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ಆದೇಶವನ್ನು ನೀಡಲಿ.

ಅಧ್ಯಕ್ಷರು: ಯಾರಾದರೂ ಉತ್ತರ ಕೊಡುವವರು ಇದ್ದೀರಾ?

ಶ್ರೀ ಎಂ. ಕೃಷ್ಣಾರೆಡ್ಡಿ: ದಯಮಾಡಿ ಅರ್ಥಮಾಡಿಕೊಳ್ಳಿ, ನಮ್ಮ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ.

ಅಧ್ಯಕ್ಷರು: ಬಿ.ಆರ್. ಪಾಟೀಲ್, ಮಾತನಾಡಿ.

5. ವಿಷಯ: ಕೆ.ಪಿ.ಎಸ್.ಸಿ. ಯಿಂದ SDAA ಗೆ ಮೌಖಿಕ ಸಂದರ್ಶನ ನಡೆಯುತ್ತಿದ್ದು ಇದನ್ನು ನಿಲ್ಲಿಸುವ ಬಗ್ಗೆ:

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿಗಳಲ್ಲಿ ಸುಮಾರು 1750 ದ್ವಿತೀಯ ದರ್ಜೆಯ ಲೆಕ್ಕ ಸಹಾಯಕರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಮೌಖಿಕ ಸಂದರ್ಶನ ನಡೆಯುತ್ತಿದ್ದು ಇದು "ಸಿ" category ಯ ಒಂದು ಹುದ್ದೆ. ಇದಕ್ಕೆ ಲಿಖಿತ ಮೂಲಕ ಪರೀಕ್ಷೆ ಆಗಿದೆ. PDO ಎನ್ನುವಂಥ ಪೋಸ್ಟ್ ಕೂಡ ಗ್ರಾಮ ಪಂಚಾಯಿತಿಯಲ್ಲಿದೆ. ಇದಕ್ಕೆ ಯಾವುದೇ ಮೌಖಿಕ ಸಂದರ್ಶನವಿಲ್ಲ. ಇದು ಅದಕ್ಕಿಂತ ಸಣ್ಣ ಹುದ್ದೆ. ಅವರಿಗೆ ಒಂದು ಮೌಖಿಕ ಸಂದರ್ಶನವನ್ನಿಟ್ಟಿದ್ದಾರೆ. ಇದಕ್ಕೆ 10+2, Computer basic knowledge ಇರಬೇಕೆಂದು ಇದೆ. PDO ಹುದ್ದೆಗೆ ಪರೀಕ್ಷೆ ಬರೆದ ಅಂಕಗಳ ಆಧಾರದ ಮೇಲೆ ನೇಮಕಾತಿಯನ್ನು ಕೊಟ್ಟಿದ್ದಾರೆ. ಅದಕ್ಕಿಂತ ಕೆಳಗಿನ ಹುದ್ದೆ ಇದಕ್ಕೆ ಮೌಖಿಕ ಸಂದರ್ಶನವನ್ನು ನಡೆಸುತ್ತಿದ್ದಾರೆ.

ಅಧ್ಯಕ್ಷರು: ಸಂದರ್ಶನ ಬೇಕೋ ಅಥವಾ ಬೇಡವೆನ್ನುತ್ತೀರೋ ಹೇಳಿ.

ಶ್ರೀ ಬಿ.ಆರ್. ಪಾಟೀಲ್: ಕೆಪಿಎಸ್‌ಸಿ ಯಲ್ಲಿ oral interview ನಡೆಯುತ್ತಿದೆ. ಇದರಲ್ಲಿ ಬಹಳ ಅವ್ಯವಹಾರ ನಡೆಯುತ್ತದೆಂದು ಹೇಳಿ ಬಹಳ ಗುಮಾನಿ ಇದೆ. C-Category ಹುದ್ದೆಗೆ ನೀವು oral interview ತೆಗೆದುಕೊಳ್ಳುತ್ತಿದ್ದೀರಿ. ಈಗಾಗಲೇ ಇದಕ್ಕಿಂತ ಮೇಲಿನ ಹುದ್ದೆಗೆ ನೀವು ನೇಮಕಾತಿಯನ್ನು ಕೊಟ್ಟು ಈ ತರಹ ಈ ಹುದ್ದೆಗೆ ಮೌಖಿಕ ಸಂದರ್ಶನ ನಡೆಸುವುದರಿಂದ ನಮ್ಮ ಗ್ರಾಮೀಣ ಭಾಗದ ಮಕ್ಕಳಿಗೆ ಅನ್ಯಾಯವಾಗುವುದರಿಂದ ತಕ್ಷಣ ಈ ನೇಮಕಾತಿಯನ್ನು ನಿಲ್ಲಿಸಬೇಕು. ಅವರು ಲಿಖಿತ ಮೂಲಕ ಪರೀಕ್ಷೆ ಬರೆದು ಪಾಸಾಗಿದ್ದಾರೆ ಅವರಿಗೆ ಅದೇ ಆಧಾರದ ಮೇಲೆ ನೌಕರಿಯನ್ನು ಕೊಡಿಸಬೇಕು ಮತ್ತು ಗ್ರಾಮೀಣ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕು. ಜಾಸ್ತಿ ಜನ ಸಿಟಿಯವರು ಪಾಸಾಗುತ್ತಾರೆ. ಸಿಟಿಯವರು ಹಳ್ಳಿಗಳಿಗೆ ಹೋಗುವುದಿಲ್ಲ. ಮತ್ತೆ ಗ್ರಾಮ ಪಂಚಾಯಿತಿಯಲ್ಲಿ ಹುದ್ದೆಗಳು ಖಾಲಿ ಬೀಳುತ್ತವೆ. ಮತ್ತೆ ಗ್ರಾಮ ಪಂಚಾಯಿತಿಯಲ್ಲಿ ಕೆಲಸವಾಗದೇ ಜನ ಸಫರ್ ಆಗುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಲೋಕಸೇವಾ ಆಯೋಗವು ಅಯ್ಕೆ ಪ್ರಾಧಿಕಾರವಾಗಿದ್ದು, ರಾಜ್ಯ ಸಿವಿಲ್ ಸೇವೆಗಳ ವಿವಿಧ ಹುದ್ದೆಗಳಿಗೆ ಆಯಾ ಇಲಾಖೆಯು ನಿರ್ದಿಷ್ಟಪಡಿಸಿದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ವಿವಿಧ ವರ್ಗದ ಹುದ್ದೆಗಳಿಗೆ ಸರ್ಕಾರದ/ನೇಮಕಾತಿ ಪ್ರಾಧಿಕಾರಿಗಳ ಪ್ರಸ್ತಾವನೆಯಂತೆ ಆಯ್ಕೆ ಪ್ರಕ್ರಿಯೆಯನ್ನು ನಡೆಸುತ್ತದೆ. ಪ್ರಸ್ತುತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿರ್ದಿಷ್ಟ ಪಡಿಸಲಾಗಿರುವಂತೆ 1750 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳಿಗೂ ಸಹ ಇಲಾಖೆಯು ಕಳುಹಿಸಲಾದ ಪ್ರಸ್ತಾವನೆ ಮತ್ತು ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) ನಿಯಮಗಳು 2006ರನ್ವಯ, ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ

ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿದ್ದು ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ದಿನಾಂಕ: 30–12–2013ರ ಪತ್ರದಲ್ಲಿ ಸಂದರ್ಶನ ನಡೆಸಿ, ಆಯ್ಕೆ ಪಟ್ಟಿ ನೀಡುವಂತೆ ಸೂಚಿಸಲಾಗಿರುವ ಮೇರೆಗೆ, ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, oral interview ನಲ್ಲಿ ಬಹಳ ಅವ್ಯವಹಾರ ನಡೆಯುತ್ತಿದೆ. ಅದು C-Category ಹುದ್ದೆ ಆಗಿರುವುದರಿಂದ ಲಿಖಿತ ಪರೀಕ್ಷೆ ಮೂಲಕ ಬರೆದ ಅಂಕಗಳ ಆಧಾರದ ಮೇಲೆ ನೇಮಕಾತಿ ಕೊಡಬೇಕು. PDO ಗಳಿಗೆ ಪರೀಕ್ಷೆ ಆಧಾರದ ಮೇಲೆ ನೇಮಕಾತಿ ಕೊಡುತ್ತಾರೆ. ಇದು ಅದಕ್ಕಿಂತ ಸಣ್ಣ ಹುದ್ದೆ. ಇಲ್ಲಿ ಅವ್ಯವಹಾರ ನಡೆಯುತ್ತಿದೆ ಅದನ್ನು ನಿಲ್ಲಿಸಿ. ಲಿಖಿತ ಮೂಲಕ ಏನು ಪರೀಕ್ಷೆ ಮಾಡಿದ್ದೀರಿ ಅದರ ಮೇಲೆ ನೀವು ಕೆಲಸ ಕೊಡಿ.

ಅಧ್ಯಕ್ಷರು: ಅವರು ತೀರ್ಮಾನ ಮಾಡಿದ್ದಾರೆ. ನೀವು ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸದಸ್ಯರು ಏನು ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ. ಅದು ಸರ್ಕಾರದ ನಿಗಾದಲ್ಲಿರುತ್ತದೆ ಮತ್ತು ಗಮನದಲ್ಲಿರುತ್ತದೆ. ಅದಕ್ಕೆ ಸೂಕ್ತವಾಗಿರತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಆರ್. ಪಾಟೀಲ್: Oral interview ಅದನ್ನು ತಡೆದು ತಾವು ನೇಮಕಾತಿಯನ್ನು ನಿಲ್ಲಿಸಿ ನೀವು ನೇರವಾಗಿ ನೇಮಕಾತಿ ಮಾಡಿಕೊಳ್ಳಿ ಎಂದು ಹೇಳಿ, ಇದು PDO ಗಿಂತ ಕೆಳಗಡೆಯ ಹುದ್ದೆ, ನೀವು PDO ಗೆ oral interview ತೆಗೆದುಕೊಂಡಿರುವುದಿಲ್ಲ.

ಅಧ್ಯಕ್ಷರು: ನೀವು ರೆಕಾರ್ಡ್ ಮಾಡಬೇಡಿ.

ಶ್ರೀ ಬಿ.ಆರ್. ಪಾಟೀಲ್: ದಯಮಾಡಿ ಸರ್ಕಾರದವರು interview ಅನ್ನು ನಿಲ್ಲಿಸಿ.